ವಿಷಯ:- ಗ್ರಾಮೀಣ ಹಾಗೂ ನಗರಗಳ ಬಾಲಕ:ಬಾಲಕಿಯರ ಸಾಕ್ಷರತೆ.

15(64)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ವಿವಿಧ ಜಿಲ್ಲೆಗಳಲ್ಲಿ ಗ್ರಾಮೀಣ ಬಾಲಕ:ಬಾಲಕಿಯರ ಸಾಕ್ಷರತೆ ಹಾಗೂ ನಗರಗಳ ಬಾಲಕ:ಬಾಲಕಿಯರ ಸಾಕ್ಷರತೆಯ ಅಂಕಿ ಅಂಶಗಳೇನು;

ಆ) ಗ್ರಾಮೀಣ ಮತ್ತು ನಗರಗಳ, ನಡುವಿನ ಸಾಕ್ಷರತೆಯ ಅಂತರವನ್ನು ತಡೆಯಲು ಸರ್ಕಾರವು ಹಾಕಿ ಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಅನುಬಂಧ-1ರಲ್ಲಿ 1991ರ ಜನಗಣತಿ ಆಧರಿಸಿ ಗುರ್ತಿಸಿರುವ ಜಿಲ್ಲಾವಾರು ಗ್ರಾಮೀಣ ಮತ್ತು ನಗರ ಪ್ರದೇಶಗಳ ಸಾಕ್ಷರತಾ ಪ್ರಮಾಣವನ್ನು ಲಗತ್ತಿಸಿದೆ. ಬಾಲಕ-ಬಾಲಕಿಯರ ಸಾಕ್ಷರತಾ ಪ್ರಮಾಣವನ್ನು ಪ್ರತ್ಯೇಕವಾಗಿ ಗುರ್ತಿಸಿರುವುದಿಲ್ಲ. ಆದರೆ 6-10 ವಯೋಮಿತಿಯ ಬಾಲಕ-ಬಾಲಕಿಯರ ಅಂದಾಜಿಸಿದ ಮಕ್ಕಳ ಸಂಖ್ಯೆ ಮತ್ತು ಅವರಲ್ಲಿ ಶಾಲೆಗಳಲ್ಲಿ ಹಾಜರಾಗುತ್ತಿರುವ ಮಕ್ಕಳ ಸಂಖ್ಯೆಯನ್ನು ಜಿಲ್ಲಾವಾರು ಅನುಬಂಧ-2 ರಲ್ಲಿ ಅವಗಾಹನೆಗಾಗಿ ಲಗತ್ತಿಸಿದೆ.

ಆ) ರಾಜ್ಯದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಶೈಕ್ಷಣಿಕ ಸೌಲಭ್ಯಗಳ ಗುಣಮಟ್ಟದ ಹಾಗೂ ಮಕ್ಕಳ ಸಾಕ್ಷರತೆಯ ಪ್ರಮಾಣಗಳಲ್ಲಿ ಅಂತರವಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಅಂತರವನ್ನು ಕಡಿಮೆ ಮಾಡಲು ಸರ್ಕಾರವು ಸಾರ್ವಜನಿಕ ಶಿಕ್ಷಣ ಇಲಾಖೆಯವತಿಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

1. ಗ್ರಾಮೀಣ ಪ್ರದೇಶಗಳಲ್ಲಿ 300ಕ್ಕೂ ಹೆಚ್ಚು ಜನಸಂಖ್ಯೆ ಇರುವ ಪ್ರತಿ ಗ್ರಾಮದಲ್ಲೂ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗುತ್ತಿದೆ.

ಶಾಲೆಗಳನ್ನು ತೆರೆಯಲು ಮುಂದೆ ಬರುತ್ತಿರುವ ಖಾಸಗಿ ಸಂಸ್ಥೆಗಳಿಗೆ ಅವರು ಅವಶ್ಯಕವಿರುವ ಸೌಲಭ್ಯಗಳನ್ನು ಒದಗಿಸಿದ್ದಲ್ಲಿ ಅನುಮತಿ ನೀಡಲಾಗುತ್ತಿದೆ. 1996-97ನೇ ಸಾಲಿನಲ್ಲಿ 873 ಹೊಸ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗಿದೆ, ಹಾಗೂ ಹಾಲಿ ಇದ್ದ 978 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳಾಗಿ ಮೇಲ್ದರ್ಜೆಗೆ ಉನ್ನತೀಕರಿಸಲಾಗಿದೆ. ಇದಲ್ಲದೆ, 186 ಖಾಸಗಿ ಸಂಸ್ಥೆಗಳಿಗೆ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ಇದೇ ರೀತಿ 1996-97ನೇ ಸಾಲಿನಲ್ಲಿ 237 ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿದ್ದು 266 ಖಾಸಗಿ ಸಂಸ್ಥೆಗಳಿಗೆ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

2. ಕೇವಲ ಶಾಲಾ ಸೌಲಭ್ಯ ವಿಸ್ತರಿಸುವುದಲ್ಲದೆ, ಶಾಲೆಗಳಿಗೆ ದಾಖಲಾಗದ ಅಥವಾ ಕ್ರಮವಾಗಿ ಹಾಜರಾಗದ ಮಕ್ಕಳನ್ನು ಸಹ ಶಾಲೆಗಳಿಗೆ ಆಕರ್ಷಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತದೆ.

1. **ವಿಶೇಷ ದಾಖಲಾತಿ ಆಂದೋಲನ:-** ಪ್ರತಿ ವರ್ಷ ಜುಲೈ ಮಾಹೆಯಲ್ಲಿ ವಿಶೇಷ ದಾಖಲಾತಿ ಆಂದೋಲನಗಳನ್ನು ನಡೆಸಲಾಗುತ್ತಿದೆ. ಈ ಆಂದೋಲನದಲ್ಲಿ ಶಿಕ್ಷಕರು ಶಾಲಾ ಮಕ್ಕಳು ಜನ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಜಾತಾಗಳಲ್ಲಿ ಮಕ್ಕಳನ್ನು ಶಾಲೆಗಳಿಗೆ ಕಳುಹಿಸದಿರುವ ಪೋಷಕರ ಮನೆಗಳಿಗೆ ಹೋಗಿ ಶಿಕ್ಷಣದ ಮಹತ್ವ ವಿವರಿಸಿ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಲು ಅವರ ಮನ ಒಲಿಸಲಾಗುತ್ತಿದೆ. ಇದರಿಂದ ಉತ್ತಮ ಫಲಿತಾಂಶ ದೊರೆತಿದೆ. ವರ್ಷವಾರು ಸಂಖ್ಯೆ ಕೆಳಕಂಡಂತಿರುತ್ತದೆ:

1992-93	-	4.72 ಲಕ್ಷ
1993-94	-	4.27 ಲಕ್ಷ
1994-95	-	4.30 ಲಕ್ಷ
1995-96	-	3.51 ಲಕ್ಷ
1996-97	-	3.29 ಲಕ್ಷ

ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲಾಗಿದೆ.

2. ಅನೇಕ ಪೋಷಕರು ತಮ್ಮ ಬಡತನದಿಂದಾಗಿ ತಮ್ಮ ಮಕ್ಕಳಿಗೆ ಶೈಕ್ಷಣಿಕ ಅವಶ್ಯಕತೆಗಳಾದ ಪುಸ್ತಕ, ಸಮವಸ್ತ್ರ ಶಾಲಾಬ್ಯಾಗ್-ಲೇಖನ ಸಾಮಗ್ರಿಗಳನ್ನು ಕೊಡಿಸಲಾಗದೆ ಶಾಲೆಗಳಿಗೆ ಕಳುಹಿಸುತ್ತಿಲ್ಲ. ಇದರಿಂದಾಗಿ ಮಕ್ಕಳು ತಮ್ಮ ಶೈಕ್ಷಣಿಕ ಅವಶ್ಯಕತೆಗಳಿಗಾಗಿ ತಮ್ಮ ಪೋಷಕರಿಗೆ ಹೊರೆಯಾಗದ ಹಾಗೇ ನೋಡಿ ಕೊಳ್ಳಲು, 1. ಉಚಿತ ಪಠ್ಯಪುಸ್ತಕ 2. ಉಚಿತ ಸಮವಸ್ತ್ರ 3. ಉಚಿತ ಶಾಲಾಬ್ಯಾಗ್ 4. ಆಹಾರ : ಮಧ್ಯಾಹ್ನ ಉಪಹಾರ ಯೋಜನಾ ಕಾರ್ಯಕ್ರಮಗಳನ್ನು ಅನುಷ್ಠಾನ-ಗೊಳಿಸಲಾಗುತ್ತಿದೆ.

3. ಇದಲ್ಲದೇ ಶಾಲಾ ವಾತಾವರಣಗಳನ್ನು ಸಹ ಆಕರ್ಷಣೀಯವಾಗಿ ಮಾಡಲು ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಗಿದೆ:

1. ಪ್ರತಿವರ್ಷ 10,000 ಕೊಠಡಿ ನಿರ್ಮಾಣ
2. ಶಾಲಾ ಕೊಠಡಿ ದುರಸ್ಥಿ
3. ಶಾಲೆಗಳಿಗೆ ನೀರು ಮತ್ತು ಶೌಚಾಲಯ ಸೌಲಭ್ಯ ಕಲ್ಪಿಸುವುದು
4. ಶಾಲೆಗಳಿಗೆ ಪೀಠೋಪಕರಣ ಹಾಗೂ ಕಲಿಕಾ ಬೋಧನಾ ಸಾಮಗ್ರಿ ಒದಗಿಸುವಿಕೆ

4. ಹೆಚ್ಚುವರಿ ಶಿಕ್ಷಕರ ಹುದ್ದೆಗಳ ಸೃಜನೆ:-

ಹೊಸದಾಗಿ ಪ್ರಾರಂಭಿಸುವ ಶಾಲೆಗಳಿಗೆ ಶಿಕ್ಷಕರನ್ನು ನೀಡಲು ಹಾಗೂ ಹಾಲಿ ಇರುವ ಕಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸದಾಗ ಅವಶ್ಯಕವಿರುವ ಹೆಚ್ಚುವರಿ ಶಿಕ್ಷಕರನ್ನು ನೀಡಲು, 1993-94 ರಿಂದ ಪ್ರತಿ ವರ್ಷ 5000 ದಂತೆ ಈವರೆವಿಗೆ ಹೆಚ್ಚುವರಿ ಶಿಕ್ಷಕರ ಹುದ್ದೆಗಳನ್ನು ಸೃಜಿಸಲಾಗಿದೆ. ಈ ಹುದ್ದೆಗಳಿಗೆ ನೇಮಕಗೊಂಡ ಎಲ್ಲಾ ಶಿಕ್ಷಕರನ್ನು ಗ್ರಾಮೀಣ ಪ್ರದೇಶಗಳ ಶಾಲೆಗಳಿಗೆ ನೇಮಕ ಮಾಡಲಾಗುತ್ತಿದೆ.

5. ವಸತಿ ಶಾಲೆಗಳ ಪ್ರಾರಂಭ:-

ಗ್ರಾಮೀಣ ಪ್ರದೇಶಗಳಲ್ಲಿ ಅದರಲ್ಲೂ ಹಿಂದುಳಿದ ವರ್ಗಗಳ ಮಕ್ಕಳು ಶಾಲಾ ಶಿಕ್ಷಣಕ್ಕಾಗಿ ತಮ್ಮ ಪೋಷಕರಿಗೆ ಹೊರೆಯಾಗದ ಹಾಗೇ ಮಾಡಲು 1995-96ನೇ ಸಾಲಿನಲ್ಲಿ ಶಿಕ್ಷಣ ಇಲಾಖೆಯ ವತಿಯಿಂದ ಪ್ರತಿ ಜಿಲ್ಲೆಗೆ ಒಂದರಂತೆ 20 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಈ ಶಾಲೆಗಳಲ್ಲಿ ಶೇಕಡ 80 ರಷ್ಟು ದಾಖಲಾತಿಯನ್ನು ಗ್ರಾಮೀಣ ಪ್ರದೇಶಗಳ ಹಿಂದುಳಿದ ವರ್ಗಗಳ ಮಕ್ಕಳಿಗೆ ಮೀಸಲಿರಿಸಿ ದಾಖಲಾತಿಮಾಡಿಕೊಳ್ಳಲಾಗುತ್ತಿದೆ. ಇಲ್ಲಿ ದಾಖಲಾದ ಎಲ್ಲಾ ಮಕ್ಕಳಿಗೂ ಊಟದ, ವಸತಿ, ಪಠ್ಯ ಪುಸ್ತಕ-ಸಮವಸ್ತ್ರಗಳು-ಹಾಗೂ ಲೇಖನ ಸಾಮಗ್ರಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ಇದೇ ರೀತಿಯಾಗಿ ಪರಿಶಿಷ್ಟ ಜಾತಿ ಮತ್ತು ವರ್ಗದ ಪ್ರತಿಭಾವಂತ ಹೆಣ್ಣು ಮಕ್ಕಳಿಗಾಗಿ ಪ್ರತಿ ವಿಭಾಗದಲ್ಲಿ ಒಂದೊಂದರಂತೆ ನಾಲ್ಕು ಸರ್ಕಾರಿ ವಸತಿ ಪ್ರೌಢಶಾಲೆಗಳನ್ನು ಹಾಗೂ ಶಿವಮೊಗ್ಗ-ಧಾರವಾಡಗಳಲ್ಲಿ ಖಾಸಗಿ ಅನುದಾನಿತ ವಸತಿ ಪ್ರೌಢಶಾಲೆಗಳನ್ನು ಪ್ರಾರಂಭಿಸಿ ನಡೆಸಲಾಗುತ್ತಿದೆ.

6. ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ನಿರ್ವಹಣೆಯನ್ನು ಪಂಚಾಯತ್ ರಾಜ್ ಸಂಸ್ಥೆಗಳ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ವ್ಯವಸ್ಥೆಯಲ್ಲಿ ಶೈಕ್ಷಣಿಕ ಸೌಲಭ್ಯಗಳನ್ನು ಪಡೆಯಲು ಹಾಗೂ ಇರುವ ಸೌಲಭ್ಯಗಳ ಗುಣಮಟ್ಟವನ್ನು ವಿಸ್ತರಿಸುವ ಜವಾಬ್ದಾರಿಯನ್ನು ಪ್ರಜೆಗಳಿಗೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಶಾಲೆ ಇರುವ ಗ್ರಾಮದಲ್ಲೂ ಗ್ರಾಮ ಶಿಕ್ಷಣ ಸಮಿತಿಗಳು ಹಾಗೂ ಶಾಲಾಭಿವೃದ್ಧಿ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳ ಸದಸ್ಯರಿಗೆ ತಮ್ಮ ಗ್ರಾಮಗಳಲ್ಲಿ ಶೈಕ್ಷಣಿಕ ಅಭಿವೃದ್ಧಿಯ ಬಗ್ಗೆ ಅವರ ಜವಾಬ್ದಾರಿಗಳು ಹಾಗೂ ಕರ್ತವ್ಯಗಳ ಅರಿವು ಮೂಡಿಸಲು ತರಬೇತಿಗಳನ್ನು ಸಹ ಶಿಕ್ಷಣ ಇಲಾಖೆಯ ವತಿಯಿಂದ ನೀಡಲಾಗುತ್ತಿದೆ.

ಇದಲ್ಲದೆ ಶಿಕ್ಷಣ ಸೌಲಭ್ಯಗಳ ವಿಸ್ತರಣೆ ಮತ್ತು ಗುಣಮಟ್ಟ ಉತ್ತಮಪಡಿಸುವ ಸಂಬಂಧವಾಗಿ

1. ವಿಶ್ವಬ್ಯಾಂಕ್ ನೆರವಿನ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ
2. ಕೇಂದ್ರ ಸರ್ಕಾರದ ನೆರವಿನ ಕಪ್ಪುಹಲಗೆ ಯೋಜನೆ
3. ಯುನಿಸೆಫ್ ನೆರವಿನ ಎಂ.ಎಲ್.ಎಲ್. ಯೋಜನೆಗಳನ್ನು ಸಹ ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದಾಗಿ ಶಾಲೆ ಬಿಡುವ ಮಕ್ಕಳ ಪ್ರಮಾಣ ಕಡಿಮೆಯಾಗುತ್ತಿದೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚುತ್ತಿದೆ.

STATEMENT SHOWING DISTRICT WISE RURAL/URBAN, MALE/FEMALE POPULATION AND LITERACY RATE. (BASED 1991 CENSUS DATA)

(Figures in '000s)

SL	DISTRICT NAME	POPULATION					ABOVE 7 YEARS				
		MALE	FEMALE	TOTAL	RURAL	URBAN	RURAL MALE	RURAL FEMALE	RURAL TOTAL	URBAN MALE	URBAN FEMALE
1	Bangalore urban	2543	2296	4839	670	4169	201	117	318	1613	1231
2	Bangalore rural	860	813	1673	1370	303	348	188	536	99	73
3	Kolar	1128	1089	2217	1700	517	411	203	614	184	141
4	Tumkur	1177	1129	2306	1924	382	522	297	819	143	104
5	Chitradurga	1122	1058	2180	1591	589	415	228	643	212	154
6	Shimoga	974	936	1910	1404	506	398	257	655	189	149
7	Mysore	1621	1544	3165	2225	940	440	233	673	332	263
8	Mandya	838	806	1644	1377	267	333	186	519	90	67
9	Coorg	247	242	489	411	78	128	101	229	31	21
10	Chikkamagalur	515	502	1017	845	172	246	169	415	65	51
11	Hassan	785	785	1570	1297	273	356	219	575	101	81

LITERACY RATE									
		RURAL			URBAN			TOTAL	
TOTAL	MALE	FEMALE	TOTAL	MALE	FEMALE	TOTAL	MALE	FEMALE	TOTAL
2844	67.97	44.09	56.68	85.28	72.68	79.33	82.94	68.81	76.27
172	58.61	33.43	46.37	74.56	59.68	67.39	61.51	38.15	50.17
325	56.79	29.06	43.16	81.63	66.15	74.09	62.69	37.75	50.45
247	63.00	36.98	50.23	82.51	67.79	75.61	66.49	41.93	54.48
366	61.36	31.42	48.69	81.20	65.05	73.52	66.88	43.36	55.48
338	66.38	44.24	55.48	84.23	71.35	78.01	71.24	51.42	61.53
595	46.01	25.53	36.00	79.69	66.91	73.50	56.23	37.95	47.32
157	55.89	32.12	44.19	75.75	60.66	68.46	59.18	36.70	48.15
52	72.79	58.16	65.60	88.43	77.76	83.27	75.35	61.22	68.35
116	67.59	47.19	57.46	84.73	72.03	78.59	70.56	51.31	60.05
182	65.51	39.55	52.40	84.02	71.08	77.76	68.57	44.90	56.85

SL	DISTRICT NAME	POPULATION					ABOVE 7 YEARS				
		MALE	FEMALE	TOTAL	RURAL	URBAN	MALE	RURAL FEMALE	TOTAL	MALE	URBAN FEMALE
12	Dakshina Kannada	1306	1388	2694	1931	763	638	555	1193	301	262
13	Belgaum	1834	1750	3584	2742	842	703	342	1045	308	218
14	Bijapur	1491	1437	2928	2239	689	603	313	916	237	154
15	Dharwad	1802	1701	3503	2279	1224	641	337	978	423	298
16	Uttar Kannada	621	599	1220	926	294	288	197	485	113	91
17	Gulbarga	1316	1266	2582	1972	610	349	124	473	195	123
18	Bellary	962	928	1890	1326	564	281	126	407	174	113
19	Raichur	1167	1143	2310	1830	480	321	119	440	138	83
20	Bidar	643	613	1256	1010	246	219	97	316	83	52
	Total	22952	22025	44977	31069	13908	7841	4408	12249	5031	3729

LITERACY RATE									
		RURAL			URBAN			TOTAL	
TOTAL	MALE	FEMALE	TOTAL	MALE	FEMALE	TOTAL	MALE	FEMALE	TOTAL
563	81.65	64.00	72.37	90.87	78.21	84.51	84.40	67.96	75.86
526	61.23	31.07	46.47	83.54	62.99	73.59	66.65	38.69	53.00
391	66.09	35.29	50.91	80.88	55.27	68.42	69.69	40.06	55.13
721	66.70	37.13	52.34	79.82	59.93	70.20	71.37	45.20	58.68
204	72.58	51.31	62.10	88.12	73.79	81.10	76.39	56.77	66.73
318	44.32	16.06	30.36	75.86	51.87	64.36	52.08	24.49	38.54
287	52.73	24.34	38.71	71.93	49.32	60.93	58.71	31.97	45.57
221	44.26	16.48	30.42	68.53	43.59	56.38	49.53	22.15	35.96
135	53.85	24.51	39.43	78.76	55.91	68.03	58.97	30.53	45.11
8760	60.30	34.76	47.69	82.04	65.74	74.20	67.26	44.34	56.04

ಅನುಬಂಧ-2

6 ರಿಂದ 10 ವಯೋಮಿತಿಯ ಬಾಲಕ-ಬಾಲಕಿಯರ ಅಂದಾಜಿಸಿದ ಮಕ್ಕಳ ಸಂಖ್ಯೆ ಮತ್ತು ಅವರಲ್ಲಿ ಶಾಲೆಗೆ ಹಾಜರಾಗುತ್ತಿರುವ ಮಕ್ಕಳ ಸಂಖ್ಯೆಯ ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆ	6ರಿಂದ 10 ವಯೋಮಿತಿಯ ಮಕ್ಕಳ ಸಂಖ್ಯೆ			
		ಗ್ರಾಮೀಣ		ನಗರ	
		ಹುಡುಗರು	ಹುಡುಗಿಯರು	ಹುಡುಗರು	ಹುಡುಗಿಯರು
1.	ಬೆಂಗಳೂರು ನಗರ	44589	43999	277447	273778
2.	ಬೆಂಗಳೂರು ಗ್ರಾಮಾಂತರ	91174	89968	20165	19898
3.	ಬೆಳಗಾಂ	182480	180067	56035	55294
4.	ಬಳ್ಳಾರಿ	88245	87078	37534	37038
5.	ಬೀದರ್	67216	66327	16371	16155
6.	ಬಿಜಾಪುರ	149005	147035	45853	45247
7.	ಚಿಕ್ಕಮಗಳೂರು	56235	55491	11447	11295
8.	ಚಿತ್ರದುರ್ಗ	105881	104481	39198	38680
9.	ದಕ್ಷಿಣ ಕನ್ನಡ	128508	126809	50778	50106
10.	ಧಾರವಾಡ	151667	149662	81457	80380
11.	ಗುಲ್ಬರ್ಗಾ	131237	129501	40596	40059
12.	ಹಾಸನ	86315	85174	18168	17928
13.	ಕೊಡಗು	27352	26990	5191	5122
14.	ಕೋಲಾರ	113135	111639	34406	33951
15.	ಮಂಡ್ಯ	91639	90428	17769	17534
16.	ಮೈಸೂರು	148074	146116	62557	61730
17.	ರಾಯಚೂರು	121787	120176	34546	31522
18.	ಶಿವಮೊಗ್ಗ	93466	92201	33674	33229
19.	ತುಮಕೂರು	128042	126349	25422	25086
20.	ಉತ್ತರ ಕನ್ನಡ	61625	60810	19566	19307

ಕ್ರಮ ಸಂಖ್ಯೆ	ಜಿಲ್ಲೆ	1 ರಿಂದ 4 ತರಗತಿಗಳಲ್ಲಿ ಹಾಜರಾಗುತ್ತಿರುವ ಮಕ್ಕಳ ಸಂಖ್ಯೆ			
		ಗ್ರಾಮೀಣ		ನಗರ	
		ಹುಡುಗರು	ಹುಡುಗಿಯರು	ಹುಡುಗರು	ಹುಡುಗಿಯರು
1.	ಬೆಂಗಳೂರು ನಗರ	36997	40829	230129	253967
2.	ಬೆಂಗಳೂರು ಗ್ರಾಮಾಂತರ	69574	61593	17502	17483
3.	ಬೆಳಗಾಂ	135405	142774	55106	53540
4.	ಬಳ್ಳಾರಿ	81600	80423	35532	33652
5.	ಬೀದರ್	-	-	-	-
6.	ಬಿಜಾಪುರ	122773	114181	41996	40317
7.	ಚಿಕ್ಕಮಗಳೂರು	39157	37921	7969	7784
8.	ಚಿತ್ರದುರ್ಗ	92671	82129	33911	29411
9.	ದಕ್ಷಿಣ ಕನ್ನಡ	–	–	–	–
10.	ಧಾರವಾಡ	126789	107200	72918	58358
11.	ಗುಲ್ಬರ್ಗಾ	112829	110491	33333	27665
12.	ಹಾಸನ	60639	59413	13801	12947
13.	ಕೊಡಗು	21159	–	–	–
14.	ಕೋಲಾರ	94839	91179	31608	29912
15.	ಮಂಡ್ಯ	66367	64698	12079	10681
16.	ಮೈಸೂರು	106232	113307	44845	32201
17.	ರಾಯಚೂರು	109247	80043	31954	25340
18.	ಶಿವಮೊಗ್ಗ	72188	68257	23010	20569
19.	ತುಮಕೂರು	–	–	–	–
20.	ಉತ್ತರ ಕನ್ನಡ	–	–	–	–